## ಕಥೆ

# ಮಂತ್ರನಗರಿ




ತೆಲುಗು ಮೂಲ: **ಪಿ. ಸತ್ಯವತಿ**

ಕನ್ನಡಕ್ಕೆ: **ಎ. ನಾಗಿಣಿ**

ಕಲೆ: ವಿಶ್ವನಾಥ್ ಎ.ಎಸ್.

ನಾನೀಗ ಪಳೆಯುಳಿಕೆಗಳ ಅಡಿಯಲ್ಲಿ ಹುದುಗಿದ ಶಿಲ್ಪಗಳ ಹುಡುಕಾಟದಲ್ಲಿದ್ದೇನೆ. ಕಡಿದ ಮರಗಳ ಬೇರು ಚಿಗುರುತ್ತವೆಂಬ ಆಸೆಯಿಂದ ಮಣ್ಣು ಸಡಿಲ ಮಾಡಿ ನೀರುಣಿಸುತ್ತಿದ್ದೇನೆ. ನನ್ನ ಮಗಳು ಗೀತಾಳಿಗೆ ಇದೆಲ್ಲಾ ವ್ಯರ್ಥದ ಕೆಲಸ ಅನಿಸುತ್ತದೆ. ಅವಳು ಎಂದೂ ಸಮಯ ವ್ಯರ್ಥ ಮಾಡಿದವಳಲ್ಲ. ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಟನೆ, ನಂತರ ಸ್ತ್ರೀಯರ ಹಕ್ಕು, ಮಾನವ ಹಕ್ಕುಗಳಿಗಾಗಿ ಸಾಕಷ್ಟು ದುಡಿದವಳು.

ಈಗಲೂ ಅವಳು ಸಮಯ ಹಾಳು ಮಾಡುತ್ತಿಲ್ಲ. ಮನೆ ಒಪ್ಪವಾಗಿ ಇಟ್ಟುಕೊಳ್ಳುತ್ತಾ, ಮೈ ದಪ್ಪಗಾಗದಂತೆ ಕಾಳಜಿ ಮಾಡಿಕೊಳ್ಳುತ್ತಾ, ಹಣ ಹೇಗೆ 'ಇನ್ವೆಸ್ಟ್' ಮಾಡಬೇಕು ಎಂದು ಯೋಚನೆ ಮಾಡುತ್ತಾ, ನೌಕರಿ ಮಾಡುತ್ತಾ ಸಾಕಷ್ಟು ಬ್ಯುಸಿಯಾಗಿಯೇ ಇದ್ದಾಳೆ. ಅವಳ 'ವೆಲ್ ಸೆಟಲ್ಡ್' ಬದುಕನ್ನು ಒಮ್ಮೆ ಬಂದು ನೋಡಬೇಕೆಂದು ಒತ್ತಾಯ ಮಾಡಿದಾಗ ಈ 'ಅನುಕೂಲಗಳ ದೇಶ'ವನ್ನು ನಾನೂ ಒಮ್ಮೆ ನೋಡಲು ಬಂದೆ. ಅವಳ ಮನೆಗೆ ಬಂದಾಗ ಅವಳೊಂದಿಗೆ ಪೂಜೆ, ಪಾರ್ಟಿಗಳಿಗೆ ಹೋಗಲೇಬೇಕಲ್ಲ! ಹಾಗೆ ರಾಧಾ ಚಿಂತಗಿಂಜಲ ಅವರ ಗೃಹ ಪ್ರವೇಶದ ಜತೆಗೆ ಇಟ್ಟುಕೊಂಡಿದ್ದ ಸತ್ಯನಾರಾಯಣ ಪೂಜಾ ಮಹೋತ್ಸವಕ್ಕೆ ಬಂದೆವು.

ನಿನ್ನೆ ಸಂಜೆ ವಾಲ್ ಮಾರ್ಟಿನಲ್ಲಿ ಸಾದಾ ಸೀದಾ ಆಗಿ ಕಂಡಿದ್ದ ಚಿಂತಗಿಂಜಲ, ಈ ದಿನ ಅಲಂಕಾರ ಮಾಡಿದ ಶುಕ್ರವಾರದ ಮಹಾಲಕ್ಷ್ಮಿಯ ಹಾಗೆ ವಜ್ರ, ವೈಢೂರ್ಯ ಭೂಷಿತೆಯಾಗಿ ಹೊಳೆಯುತ್ತಿದ್ದಳು.

ಇನ್ನು ರಮೇಶ್ ಚಿಂತಗಿಂಜಲ ರೇಷ್ಮೆ ಪಂಚೆ, ಅಂಗಿ, ಕತ್ತಿಗೆ ದಪ್ಪನೆಯ ಚಿನ್ನದ ಸರ ಹಾಕಿ ಚುನಾವಣೆಯಲ್ಲಿ ಗೆದ್ದು ತಿಮ್ಮಪ್ಪನಿಗೆ ಕಲ್ಯಾಣೋತ್ಸವ ಮಾಡಿಸಲು ಬಂದ ಹೊಸ ಶಾಸಕನ ಹಾಗೆ ಕಾಣ್ತಾ ಇದ್ದ. ಬೇಬೀ ಚಿಂತಗಿಂಜಲ ಏನು ಕಡಿಮೆಯೇ! ನಾಗರ, ಜಡೆ ಬಿಲ್ಲೆ, ಡಾಬು, ರೇಷ್ಮೆ ಲಂಗ, ಕುಪ್ಪಸ ತೊಟ್ಟು ಬಾಲಾ ತ್ರಿಪುರ ಸುಂದರಿಯ ಹಾಗೆ ಕಂಗೊಳಿಸುತ್ತಿದ್ದಳು. ಸುತ್ತಲೂ ದೊಡ್ಡ ಲ್ಯಾಂಡ್ ಸ್ಕೇಪು ಇದ್ದ ನಾಲ್ಕು ಮಲಗುವ ಕೋಣೆ ಇರುವ 'ಸಿಂಗಲ್ ಫ್ಯಾಮಿಲಿ ಹೌಸ್'. ದೇಶ ವಿದೇಶಗಳ ಹಸ್ತ ಕಲೆಗಳಿಂದ ರಾಧಾ ಚಿಂತಗಿಂಜಲ